ರಾಜ್ಯದಲ್ಲಿನ ಕೈಗಾರಿಕಾ ಸಬ್ಸಿಡಿ

2703 (3053) ಶ್ರೀ ಸುಬ್ಬಾರೆಡ್ಡಿ ಕೆ.ಎನ್. (ಬಸವನಗುಡಿ):— ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿನ ಕೈಗಾರಿಕೆಗಳಿಗೆ ಸಬ್ಸಿಡಿ ನೀಡಲಾಗುತ್ತಿದೆಯೇ?

ಆ) ಹಾಗಿದ್ದಲ್ಲಿ ಸಬ್ಸಿಡಿ ನೀಡುವ ಬಗ್ಗೆ ಯಾವ ಮಾನದಂಡ ಅಳವಡಿಸಲಾಗಿದೆ?

ಇ) ಸಣ್ಣ ಕೈಗಾರಿಕೆಗಳಿಗೆ ಹಣ ಬಿಡುಗಡೆಯಾಗದ ಬಾಕಿ ಉಳಿದಿದೆಯೇ ಹಾಗಿದ್ದಲ್ಲಿ ಅದರ ಮೊತ್ತವೆಷ್ಟು?

ಈ) ಪ್ರಸಕ್ತ ವರ್ಷದಲ್ಲಿ ಎಷ್ಟು ಸಣ್ಣ ಕೈಗಾರಿಕೆಗಳಿಗೆ ಸರ್ಕಾರ ಈವರೆಗೆ ಸಬ್ಸಿಡಿ ನೀಡಲಾಗಿದೆ?

ಶ್ರೀ ಎಸ್.ಆರ್. ಕಾಶಪ್ಪನವರ್ (ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು) :—

ಅ. ಹೌದು. ಕರ್ನಾಟಕ ಸರ್ಕಾರದ ಹೊಸ ಕೈಗಾರಿಕಾ ನೀತಿ 2001-06 ರ ಪ್ರಕಾರ "ಬಿ" ಮತ್ತು "ಸಿ" ವಲಯಗಳಲ್ಲಿ ಅತೀ ಸಣ್ಣ ಕೈಗಾರಿಕೆಗಳಿಗಾಗಿ ಹಾಗೂ "ಡಿ" ವಲಯದಲ್ಲಿರುವ ಅತೀ ಸಣ್ಣ ಮತ್ತು ಸಣ್ಣ ಕೈಗಾರಿಕೆಗಳಿಗೆ ಸಬ್ಸಿಡಿ ನೀಡಲಾಗುತ್ತಿದೆ.

ಆ. ಸ್ಥಿರಾಸ್ತಿ ಮೇಲೆ ಹೂಡಿದ ಬಂಡವಾಳದ ಮೊತ್ತಕ್ಕೆ ಅತೀ ಸಣ್ಣ ಕೈಗಾರಿಕೆಗಳಿಗೆ ವಲಯ "ಬಿ"ಗೆ ಶೇ.10ರಂತೆ ಗರಿಷ್ಟ 5.00 ಲಕ್ಷ ಮತ್ತು "ಸಿ"ಗೆ ಶೇ.20ರಂತೆ ಗರಿಷ್ಟ 10.00 ಲಕ್ಷ ಹಾಗೂ ವಲಯ "ಡಿ"ನಲ್ಲಿ ಸ್ಥಾಪಿತವಾದ ಅತೀ ಸಣ್ಣ ಮತ್ತು ಸಣ್ಣ ಕೈಗಾರಿಕೆಗಳಿಗೆ ಶೇ.25ರಂತೆ ಗರಿಷ್ಟ 12.50 ಲಕ್ಷ ಸಹಾಯಧನ ನೀಡಲಾಗುತ್ತಿದೆ.

ಇ. ಹೌದು 328.57 ಕೋಟಿಗಳು ನೀಡಲು ಬಾಕಿ ಇರುತ್ತದೆ.

ಈ. ಪ್ರಸಕ್ತ ಸಾಲಿನಲ್ಲಿ (2001-02) 808 ಸಣ್ಣ ಕೈಗಾರಿಕೆಗಳಿಗೆ ರೂ.10.00 ಕೋಟಿ ಸಬ್ಸಿಡಿ ನೀಡಲಾಗಿದೆ.

ರೇಷ್ಮೆ ಇಲಾಖೆಯ ನೌಕರರ ಸಂಖ್ಯೆಯನ್ನು ಕಡಿತಗೊಳಿಸುವ ಬಗ್ಗೆ

2704 (3054) ಶ್ರೀ ಕೆ.ಎನ್. ಸುಬ್ಬಾರೆಡ್ಡಿ (ಬಸವನಗುಡಿ) :— ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.